ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚಿಕ್ಕೋಡಿ

CC No.:-628/11

P.W.:-1

| | |
|---|---|
| ಸಾಕ್ಷಿದಾರರ ಹೆಸರು | : ಗುರಪಾಧ ತೀ ಝುರೆ |
| ವಯಸ್ಸು | : 53 ವರ್ಷ |
| ಉದ್ಯೋಗ | : ಎ.ಎಸ್.ಐ. |
| ಸಾಕೀನ | : ಚಿಕ್ಕೋಡಿ ಪಿ ಎಸ್ |

ಸಾಕ್ಷಿಗೆ ಈ ದಿನ ದಿಃ 01-07-2025 ರಂದು ಪ್ರಮಾಣ ವಚನ ಬೋಧಿಸಲಾಯಿತು
ಭಾ.ದಂ.ಸಂ. ಕಲಂಃ 299 ರ ಮೇರೆಗೆ ಸಾಕ್ಷಿಯ ವಿಚಾರಣೆ

ದಿನಾಂಕ 30-11-2024 ರಂದು ನನಗೆ ಮಾನ್ಯ ನ್ಯಾಯಾಲಯದಿಂದ ಶ್ರೀಮಂತ ದಾಬೆ ಇನ್ನುವ ಆರೋಪಿಯ ಕುರಿತು Proclamation warrant ಬಂದಿರುತ್ತದೆ . ಅದನ್ನು ಜಾರಿ ಮಾಡಲು ನಾನು ಕರಗಾಂವ ಗ್ರಾಮಕ್ಕೆ ಹೋಗಿರುತ್ತೇನೆ. ನಾನು ಅತನ ಕುರಿತು ಗ್ರಾಮದಲ್ಲಿ ವಿಚಾರಿಸಿದಾಗ ಸದರಿ ವ್ಯಕ್ತಿ ಆ ಊರಿನವರು ಅಲ್ಲ ಎಂದು ತಿಳಿದು ಬಂದಿರುತ್ತದೆ. ಅದೇ ರೀತಿ ಆರೋಪಿಯದು ಆ ಗ್ರಾಮದಲ್ಲಿ ಯಾವುದೇ ಮನೆ ಸಹ ಇರುವದಿಲ್ಲ ನಂತರ ಪಂಚರ ಜೊತೆಯಲ್ಲಿ ಪಂಚಾಯತಿಗೆ ಹೋಗಿ ವಿಚಾರಿಸಲಾಗಿ ಆ ವ್ಯಕ್ತಿ ಇರುವದಿಲ್ಲ ಎಂದು ತಿಳಿಸಿರುತ್ತಾರೆ. ಪಂಚಾಯತಿ ಕಚೇರಿಯಲ್ಲಿ ಪಂಚರ ಸಮಕ್ಷಮ ಪಂಚನಾಮೆ ಮಾಡಿರುತ್ತೇನೆ . Proclamation warrant ನ್ನು ಪಂಚಾಯತಿ ಕಚೇರಿ ನೋಟಿಸ ಬೊರ್ಡ, ಬಸ್ಯಾಂಡದಲ್ಲಿ ಅಂಟಿಸಿರುತ್ತೇನೆ . ಆರೋಪಿಯು ಚರಾಸ್ಥಿ ಮತ್ತು ಸ್ಥಿರಾಸ್ಥಿ ಹೊಂದಿರುವ ಕುರಿತು ಗ್ರಾಮ ಪಂಚಾಯತ ಕಾರ್ಯಲಯಕ್ಕೆ ಮತ್ತು ಪ್ರಾಧೇಶೀಕ ಸಾರಿಗೆ ಕಚೇರಿಗೆ ಮಾಹಿತಿಯನ್ನು ನೀಡಿರಿ ಎಂದು ಕೇಳಿಕೊಂಡಿದ್ದು ಅವರು ಆರೋಪಿಯ ಹೆಸರಿನಲ್ಲಿ ಯಾವುದೇ ಚರಾಸ್ಥಿ ಮತ್ತು ಸ್ಥಿರಾಸ್ಥಿ ಇರುವದಿಲ್ಲ ಎಂದು ಉತ್ತರವನ್ನು ನೀಡಿರುತ್ತಾರೆ. ಸದರಿ Proclamation warrant ವರದಿಯನ್ನು ನಮ್ಮ ಮೇಲಾಧಿಕಾರಿಗಳಿಗೆ ಮತ್ತು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ .

ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು, ಎರಡು ಫೋಟೋಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಮತ್ತು 3 ಎಂದು, ಪಿ ಡಿ ಓ ಗ್ರಾಮ ಪಂಚಾಯತ ಕರಗಾಂವ ರವರು ನೀಡಿರುವ ಪ್ರಮಾಣ ಪತ್ರವನ್ನು ನಿಪಿ-4 ಎಂದು, ಆರ್ ಟಿ ಓ ಚಿಕ್ಕೋಡಿ ರವರು ನೀಡಿರುವ ವರದಿಯನ್ನು ನಿಪಿ-5 ಎಂದು ಗುರುತಿಸಲಾಯಿತು.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

sd/-
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಚಿಕ್ಕೋಡಿ.